**ಸಿ.ಸಿ.ನಂ.: 35/2025**

ಪಿ.ಡಬ್ಲ್ಯೂ: **1**

(ಇಂದು ದಿನಾಂಕಃ **15-05-2025** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲು -ಆರೋಪಿ ಪರ ಶ್ರೀ. M.G.S. ವಕೀಲರಿಂದ**

ನಾನು ಫಿರ್ಯಾದಿ ಸಂಸ್ಥೆಯಿಂದ ಗೋಕರ್ಣ ಶಾಖೆಗೆ **ದಿಃ 10-10-2023** ರಿಂದ ನಿಯೋಜನೆಗೊಂಡಿರುತ್ತೇನೆ. ಈ ಪ್ರಕರಣದಲ್ಲಿ ನಾನು ಹಾಜರುಪಡಿಸಿದ ದಾಖಲಾತಿಗಳನ್ನು ನೋಡಿ ತಿಳಿದುಕೊಂಡಿರುತ್ತೇನೆ.

**ನಿ.ಪಿ.1** ನಿರ್ದಿಷ್ಟವಾಗಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನೀಡಿದ ಅಧಿಕಾರ ಪತ್ರ ಅಲ್ಲ ಎಂದರೆ ಸರಿಯಲ್ಲ. ಈ ಪ್ರಕರಣವನ್ನು ನಾವು **2024** ನೇ ಸಾಲಿನಲ್ಲಿ ದಾಖಲು ಮಾಡಿರುತ್ತೇವೆ. ನಿ.ಪಿ.1 ನ್ನು **ದಿಃ 16-09-2023** ರಂದು ನೀಡಿರುತ್ತಾರೆ ಎಂದರೆ ಸರಿ. ನಮ್ಮ ಫಿರ್ಯಾದಿ ಸಂಸ್ಥೆಯು ಸಹಕಾರಿ ಸಂಘಗಳ ಕಾಯದೆಯ ಅಡಿಯಲ್ಲಿ ದಾಖಲಾಗಿರುತ್ತದೆ. ಸಹಕಾರಿ ಸಂಘಗಳ ಕಾಯದೆಯ ಅಡಿಯಲ್ಲಿ ಚೆಕ್ ಅಮಾನ್ಯ ಪ್ರಕರಣವನ್ನು ದಾಖಲಿಸುವ ಪೂರ್ವದಲ್ಲಿ ಸಹಾಯಕ ನಿಬಂಧಕರ ಅನುಮತಿಯನ್ನು ಪಡೆದುಕೊಳ್ಳಬೇಕೆಂಬ ನಿಯಮ ಇದೆ ಎಂದರೆ ಸರಿಯಲ್ಲ.

**ನಿ.ಪಿ.2** ರಲ್ಲಿನ ಬರವಣಿಗೆ ಹಾಗೂ ಸಹಿಯಲ್ಲಿನ ಬರವಣಿಗೆಯ ಶಾಹಿಯಲ್ಲಿ ಮೇಲ್ನೋಟಕ್ಕೆ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನಿಪಿ 2 ರ ಬರವಣಿಗೆಯನ್ನು ಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ 2 ನ್ನು ಆರೋಪಿತನ ಸಹೋದರನಾದ ಗಣೇಶ ಜಟ್ಟಿ ಹನೇಹಳ್ಳಿ ಇವರು ನೀಡಿರುತ್ತಾರೆ. ಗಣೇಶ ಜಟ್ಟಿ ಹನೇಹಳ್ಳಿ ಇವರು ಆರೋಪಿತನಿಂದ ಸದ್ರಿ ಚೆಕ್‌ನ್ನು ಹೇಗೆ ಪಡೆದುಕೊಂಡಿರುತ್ತಾರೆ ಎಂಬ ಬಗ್ಗೆ ತನಗೆ ತಿಳಿದಿದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ಗಣೇಶ ಜಟ್ಟಿ ಹನೇಹಳ್ಳಿ ಇವರು ನಿ.ಪಿ.2 ನ್ನು ನಮ್ಮ

ಫಿರ್ಯಾದಿ ಸಂಸ್ಥೆಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಬೇರೆಯವರ ಚೆಕ್‌ನ್ನು ಗಣೇಶ ಜಟ್ಟಿ ಹನೇಹಳ್ಳಿ ಇವರು ಯಾವ ಕಾರಣಕ್ಕಾಗಿ ಪಡೆದುಕೊಂಡಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಆರೋಪಿಯು ಫಿರ್ಯಾದಿ ಸಂಸ್ಥೆಗೆ 2 – 3 ಬಾರಿ ಬಂದಿದ್ದು ಸಾಲದ ಬಟವಡೆಯ ಬಗ್ಗೆ ವಿಚಾರಿಸಿದ್ದು, ಸಾಲ ಮರು ಪಾವತಿಯ ಕುರಿತಾಗಿ ತಾನು ಜವಾಬ್ದಾರಿಯನ್ನು ಹೋರುತ್ತೇನೆ ಎಂಬ ಬಗ್ಗೆ ತಿಳಿಸಿದ್ದು ಇರುತ್ತದೆ.

ಈ ಪ್ರಕರಣಕ್ಕೆ ಸಂಬಂಧಪಟ್ಟ ಸಾಲದ ಬಟವಡೆಯನ್ನು ಏಕಕಾಲದಲ್ಲಿ ಮಾಡಿರುತ್ತೇವೆ. ಸಾಲದ ಸದ್ರಿ ಸಂದರ್ಭದಲ್ಲಿ ನಾನು ಫಿರ್ಯಾದಿ ಸಂಸ್ಥೆಯ ಗೋಕರ್ಣ ಶಾಖೆಯ ಶಾಖಾ ವ್ಯವಸ್ಥಾಪಕನಾಗಿ ಕರ್ತವ್ಯ ನಿರ್ವಹಿಸುತ್ತಿರಲಿಲ್ಲ. ಸಾಲಗಾರರು ನಮ್ಮ ಫಿರ್ಯಾದಿ ಸಂಸ್ಥೆಯಲ್ಲಿ ಸದಸ್ಯ ಆಗಿದ್ದರೆ ಸಾಲವನ್ನು ನೀಡುತ್ತೇವೆ. ನಾನು ನಮ್ಮ ಫಿರ್ಯಾದಿ ಸಂಸ್ಥೆಯ ಬೈಲಾಗಳನ್ನು ಓದಿಕೊಂಡಿರುತ್ತೇನೆ. 2021 ನೇ ಸಾಲಿನಲ್ಲಿ ರೂ.1 ಲಕ್ಷ ಸಾಲಕ್ಕೆ 5,400–00 ರೂಪಾಯಿಯ ಷೇರನ್ನು ಹೊಂದಿರಬೇಕಾಗುತ್ತದೆ. ಮುದ್ದತ ಠೇವಣೆಯ ರೂ 10,000–00 ವನ್ನು ಸಾಲದ ಬಟವಡೆಯ ಸಂದರ್ಭದಲ್ಲಿ ಸದ್ರಿ ಸಾಲದ ಹಣದಿಂದ ಕಡಿತಗೊಳಿಸಿ ನೀಡುತ್ತೇವೆ. ರೂ.20,000–00 ಕ್ಕಿಂತ ಹೆಚ್ಚಿನ ಸಾಲವನ್ನು ನೀಡುವ ಸಂದರ್ಭದಲ್ಲಿ ನಮ್ಮ ರಾಷ್ಟ್ರೀಕೃತ ಬ್ಯಾಂಕಗಳ ಅಥವಾ ಮಧ್ಯವರ್ತಿ ಬ್ಯಾಂಕಗಳ ಚೆಕ್‌ಗಳ ಮುಖಾಂತರ ನೀಡಬೇಕು ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ withdraw ದ ಮುಖಾಂತರ ಸಾಲವನ್ನು ನೀಡುತ್ತೇವೆ. ನಮ್ಮ ಫಿರ್ಯಾದಿ ಸಂಸ್ಥೆಯ withdrawal slip ನಲ್ಲಿ ರಶೀದಿ ನಂಬರ ಇರುತ್ತದೆ. ನಿಪಿ 11 ರಲ್ಲಿ ಯಾವ withdrawal slip ಮುಖಾಂತರ ಹಣ ಸಂದಾಯ ಆಗಿರುತ್ತದೆ ಎಂದು ನಮೂದು ಇಲ್ಲ ಎಂದರೆ ಸರಿ. ನಿಪಿ 11 ರಲ್ಲಿ ಆರೋಪಿತನಿಗೆ ಸಂಬಂಧಿಸಿದ ಸಾಲದ ಖಾತೆಯ

**ಸಿ.ಸಿ.ನಂ.**: 35/2025

ಪಿ.ಡಬ್ಲ್ಯೂ: 1

ಉತಾರ ಮಾತ್ರ ಇದೆ. ನಾವು withdrawal ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ. ಅದೇ ರೀತಿಯಾಗಿ ಉತಾತಾಯ ಖಾತೆ ನಂಬರ 108 ರ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆ.ಪ್ರ.ದ.ನ್ಯಾ.ದಂ. ಕುಮಟಾ